O.S. ನಂಬರಃ  23/2020

ಪಿ. ಡಬ್ಲ್ಯೂಃ 1

ದಿಃ 30-07-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ</u> 2ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಸ್.ಓ.ಎನ್ ಇವರಿಂದಃ

ನಿಮ್ಮ ಮದುವೆಯ ಪೂರ್ವದಲ್ಲಿ  ಜಯವಂತ ನಾಯ್ಕ ಇವರು ನಿಮಗೆ ಯಾವ ರೀತಿಯ ಪರಿಚಯ ಆಗಿರುತ್ತಾರೆ ಎಂದರೆ ಸಾಕ್ಷಿಯು ನಾನು ಬೇರೆಯವರ ಮನೆಗೆ ಕೆಲಸಕ್ಕೆ ಹೋಗುತ್ತಿದ್ದು, ಅವರೂ ಸಹ ಅಲ್ಲದೆ ಬಂದಿದ್ದರು, ಆಗಿನಿಂದ ಪರಿಚಯ ಎಂದು ನುಡಿಯುತ್ತಾರೆ.  ಬೇರೆಯವರ ಮನೆಯ ವಿಳಾಸ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಅವರ ಹೆಸರು ಜಯಮ್ಮ ತರಕಾರಿ ವ್ಯಾಪಾರ ಮಾಡುತ್ತಿದ್ದು, ಸೋಮಾರಪೇಟೆ ಊರಾಗಿರುತ್ತದೆ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರು ಆ ದಿನ ಜಯಮ್ಮ ಇವರ ಮನೆಗೆ ಯಾವ ಕಾರಣಕ್ಕೆ ಬಂದಿದ್ದರು ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಅವರ ಕಚೇರಿಗೆ ಕೆಲಸಗಾರರನ್ನು ಕೇಳಿಕೊಂಡು ಬಂದಿದ್ದರು ಎಂದು ನುಡಿಯುತ್ತಾರೆ. ಅವರನ್ನು ಭೇಟಿಯಾಗಿ ಎಷ್ಟು ವರ್ಷಗಳ ನಂತರ ಮದುವೆಯಾಯಿತು ಎಂದರೆ ಸಾಕ್ಷಿಯು ಒಂದು ವರ್ಷದ ನಂತರ ಅಂದರೆ 2002 ರಲ್ಲಿ ಮದುವೆಯಾಯಿತು ಎಂದು ನುಡಿಯುತ್ತಾರೆ. ನಿಮ್ಮ ಮದುವೆ ಯಾವ ರೀತಿ  ಆಗಿರುತ್ತದೆ ಎಂದರೆ ಸಾಕ್ಷಿಯು ದೇವಸ್ಥಾನದಲ್ಲಿ ನಾವಿಬ್ಬರು ಹಾರವನ್ನು ಬದಲಾಯಿಸಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಮದುವೆಯಲ್ಲಿ ಎಷ್ಟು ಜನ ಇದ್ದರು ಎಂದರೆ ಸಾಕ್ಷಿಯು ನಾವಿಬ್ಬರು, ಜಯಮ್ಮ ಹಾಗೂ ಜಯವಂತ  ನಾಯ್ಕ ಇವರ ಚಾಲಕ ಇದ್ದರು ಎಂದು

ನುಡಿಯುತ್ತಾರೆ. ನಿಮ್ಮ ಮದುವೆಯನ್ನು ನೊಂದಣಿ ಮಾಡಿಸಿಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮದುವೆಯಾದ ಬಗ್ಗೆ ಪೊಟೋಗಳನ್ನು ತೆಗೆದಿರುತ್ತಾರಾ ಎಂದರೆ ಇರುತ್ತವೆ ಎಂದು ನುಡಿಯುತ್ತಾರೆ. ಆ ಪೊಟೋಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ನಿಮ್ಮ ಮದುವೆ ಮಾಡಿದ ಪುರೋಹಿತರ ಹೆಸರು ಮತ್ತು ವಿಳಾಸ ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಅವರ ಹೆಸರು ರಾಘವೇಂದ್ರ ಭಟ್ ಎಂದು ಇದ್ದು, ವಿಳಾಸ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅವರು ಈಗ ಜೀವಂತ ಇದ್ದಾರಾ ಎಂದರೆ ಸಾಕ್ಷಿಯು ನಾನು ಅವರನ್ನು ನೋಡಿ ಬಹಳ ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ನಿವಿಬ್ಬರು ಎಷ್ಟು ವರ್ಷಗಳ ಕಾಲ ಸಂಸಾರ ಮಾಡಿರುತ್ತೀರಿ ಎಂದರೆ ಸಾಕ್ಷಿಯು 4 ವರ್ಷಗಳ ಕಾಲ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ 4 ವರ್ಷ ಕಾಲದಲ್ಲಿ ಜಯವಂತ ನಾಯ್ಕ ಇವರ ಕುಟುಂಬದ ಕಾರ್ಯಕ್ರಮಕ್ಕೆ ಏನಾದರೂ ಭಾಗಿಯಾಗಿರುತ್ತೀರಾ ಎಂದರೆ ಸಾಕ್ಷಿಯು 4 ವರ್ಷದಲ್ಲಿ ಭಾಗಿಯಾಗಿರುವುದಿಲ್ಲ, ಆ ನಂತರ ಆಗಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಭಾಗಿಯಾಗಿದ್ದಾಗ ಪೊಟೋ ಏನಾದರೂ ತೆಗೆದಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾವ ಕಾರ್ಯಕ್ರಮದಲ್ಲಿ ನೀವು ಭಾಗಿಯಾಗಿರುತ್ತೀರಿ ಎಂದರೆ ಸಾಕ್ಷಿಯು ಶಾಂತ ದುರ್ಗಾ ದೇವಸ್ಥಾನದಲ್ಲಿ ಮಾಂಗಲ್ಯ ಧಾರಣೆ ಕಾರ್ಯಕ್ರಮದಲ್ಲಿ ಭಾಗಿಯಾಗಿರುತ್ತೇನೆ ಎಂದು ನುಡಿಯುತ್ತಾರೆ. ಆ ಸಂದರ್ಭದಲ್ಲಿ ಜಯವಂತ ನಾಯ್ಕ ಇವರ ಕುಟುಂಬದ ಸದಸ್ಯರು ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿಯು 2ನೇ ಪ್ರತಿವಾದಿ ಮತ್ತು ಅವರ ಪತ್ನಿ ಬಂದಿದ್ದರು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನೀವು ದಾವಾ ಮನೆಯಲ್ಲಿ ಎಷ್ಟು ದಿನಗಳತನಕ ವಾಸ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಒಂದು ದಿವಸ ವಾಸ

ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಅದನ್ನು ಬಿಟ್ಟರೆ ಕೋವಿಡ್ ಪೂರ್ವದಲ್ಲಿ ವಾಸ ಮಾಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಗಂಡ ತೀರಿಕೊಂಡ ನಂತರ ಅವರ ಕಾರ್ಯ ಮುಗಿಯುವತನಕ ಅಲ್ಲಿಯೇ ವಾಸ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಈ ಪ್ರಕರಣ ಸಲ್ಲಿಸಿದಾಗಿನಿಂದ ನೀವು ಬೆಂಗಳೂರಿನಿಂದ ಬಂದು ಹೋಗುತ್ತಿದ್ದೀರಿ ಎಂದರೆ ಸರಿ. ಜಯವಂತ ನಾಯ್ಕ ಇವರು ಮರಣಹೊಂದುವ ಪೂರ್ವದಲ್ಲಿ ಬಾಡಿಗೆ ಮನೆಯಲ್ಲಿ ಇದ್ದರು ಹಾಗೂ ಸ್ವಂತ ಮನೆ ಇರಲಿಲ್ಲ ಎಂದರೆ ಸರಿ. ಅವರು ತೀರಿಕೊಂಡ ನಂತರ ನೀವು ಬಾಡಿಗೆ ಮನೆಯಲ್ಲಿ ಎಷ್ಟು ವರ್ಷಗಳತನಕ ಇದ್ದೀರಿ ಎಂದರೆ ಸಾಕ್ಷಿಯು ಒಂದು ವರ್ಷ ಇದ್ದೆ ಎಂದು ನುಡಿಯುತ್ತಾರೆ. ಒಂದು ವರ್ಷ ಇದ್ದ ಬಗ್ಗೆ ಬಾಡಿಗೆ ರಶೀದಿ ಏನಾದರೂ ಇದೆಯಾ ಎಂದರೆ ಸಾಕ್ಷಿಯು ಅವರು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರ ಮರಣಾನಂತರ ಅವರು ಇದ್ದ ಬಾಡಿಗೆ ಮನೆಯಲ್ಲಿ ನೀವು ಇದ್ದ ಬಗ್ಗೆ ಬಾಯಿ ಮಾತಿನ ಹೇಳಿಕೆ ಬಿಟ್ಟರೆ ಬೇರೆ ಯಾವುದೇ ಕಾಗದ ಪತ್ರಗಳು ಇರುವುದಿಲ್ಲ ಎಂದರೆ ಸರಿ. ನೀವು ಹಾಗೂ ಜಯವಂತ ನಾಯ್ಕ ಇವರು ಗಂಡ–ಹೆಂಡತಿಯಾಗಿ ಬಾಡಿಗೆ ಮನೆಯನ್ನು ಒಳಗೊಂಡಂತೆ ಯಾವುದೇ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ.

2. ನಿಮ್ಮ ಆಧಾರ ಕಾರ್ಡನ್ನು ಪ್ರಥಮವಾಗಿ ಎಲ್ಲಿ ಮಾಡಿಸಿರುತ್ತೀರಿ ಎಂದರೆ ಸಾಕ್ಷಿಯು ಬೆಂಗಳೂರಿನಲ್ಲಿ ಎಂದು ನುಡಿಯುತ್ತಾರೆ. ಅದು ಯಾವ ವಿಳಾಸಕ್ಕೆ ಸಂಬಂಧಿಸಿದೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯುು ನಾಗರಬಾವಿ ಬೆಂಗಳೂರಿಗೆ ಸಂಬಂಧಪಟ್ಟ ಆಧಾರ ಕಾರ್ಡ ಆಗಿರುತ್ತದೆ ಎಂದು ನುಡಿಯುತ್ತಾರೆ. ಮನೆ ಸಂಖ್ಯೆ ಹೇಳಲು ಬರುತ್ತಾ ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಆಧಾರ ಕಾರ್ಡನ್ನು ಮದುವೆ

ಪೂರ್ವದಲ್ಲಿ ಮಾಡಿಸಿಕೊಂಡಿರುತ್ತೀರಾ ಅಥವಾ ಮದುವೆ ನಂತರ ಮಾಡಿಸಿಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಮದುವೆ ನಂತರ ಎಂದು ನುಡಿಯುತ್ತಾರೆ. ಆಧಾರ ಕಾರ್ಡನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನಾಗರಬಾವಿ ವಿಳಾಸದಲ್ಲಿ ಜಯವಂತ ನಾಯ್ಕ ಇವರು ಎಂದಿಗೂ ಸಹ ವಾಸ್ತವ್ಯ ಮಾಡಿಕೊಂಡು ಬಂದಿರಲಿಲ್ಲ ಎಂದರೆ ಸರಿಯಲ್ಲ. ಆಧಾರ ಕಾರ್ಡನ್ನು ಯಾವ ಸಾಲಿನಲ್ಲಿ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಅದು ಹೇಳಲು ಬರುವುದಿಲ್ಲ, ಆಧಾರ ಕಾರ್ಡಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ನಾಗರಬಾವಿಯಲ್ಲಿ ವಾಸವಾಗಿರುವ ಬಗ್ಗೆ ಆಧಾರ ಕಾರ್ಡ ಬಿಟ್ಟು ಬೇರೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು ಚುನಾವಣಾ ಚೀಟಿ ಮತ್ತು ಮನೆ ಬಾಡಿಗೆ ಕರಾರ ಪತ್ರ ಇರುತ್ತದೆ ಎಂದು ನುಡಿಯುತ್ತಾರೆ. ನಿಪಿ-16 ರಿಂದ 18 ಆಧಾರ ಕಾರ್ಡುಗಳನ್ನು ಪಡೆದುಕೊಳ್ಳಬೇಕಾದರೆ ಯಾವ ದಾಖಲಾತಿಯನ್ನು ಸಂಬಂಧಪಟ್ಟ ಅಧಿಕಾರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಮನೆಯ ಬಾಡಿಗೆ ಕರಾರು ಪತ್ರ, ವಿದ್ಯುತ್ ಬಿಲ್ ಮತ್ತು ಗ್ಯಾಸ್ ಬಿಲ್ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರ ಮರಣಪೂರ್ವದಲ್ಲಿ ಅವರಿಗೆ 20 ವರ್ಷಗಳತನಕ ಪಾರ್ಶ್ವ ವಾಯು ಆಗಿತ್ತು ಎಂದರೆ ಸಾಕ್ಷಿಯು 2012 ರಿಂದ ಅರುಣಾಚಲ ಪ್ರದೇಶದಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಮದುವೆಯ ಆಯಿತು ಎನ್ನುವ ಸಂದರ್ಭದಲ್ಲಿ ಜಯವಂತ ನಾಯ್ಕ ಇವರು ಎಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಸೋಮಾರಪೇಟೆಯ ಬಿ ಎಸ್ ಎನ್ ಎಲ್ ಕಚೇರಿಯಲ್ಲಿ ಎಸ್ ಡಿ ಓ ಟಿ ಎಂದು ಕೆಲಸ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಿಮ್ಮ ಮದುವೆಯ ಆಯಿತು ಎನ್ನುವ ಅವಧಿಯಿಂದ ಇಲ್ಲಿಯವರೆಗೂ ಜಯವಂತ ನಾಯ್ಕ ಇವರ ಕುಟುಂಬದ ಸದಸ್ಯರ ಮದುವೆ ಮತ್ತು ಇತರ ಕಾರ್ಯಕ್ರಮಗಳಿಗೆ ಭಾಗಿಯಾಗಿದ್ದು

ಇರುವುದಿಲ್ಲ ಎಂದರೆ ಸಾಕ್ಷಿಯು ಅವರು ನಮಗೆ ಹೇಳಿರುವುದಿಲ್ಲ ಹಾಗೂ ನಮ್ಮ ಮಕ್ಕಳು ಚಿಕ್ಕವರು ಇದ್ದರು ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರ ಅಣ್ಣನ ದೇವಪ್ಪ ನಾಯ್ಕ ಇವರ ಮಗನ ಮದುವೆ ಗೋವಾದಲ್ಲಿ ಆಗಿರುತ್ತದೆ ಎಂದರೆ ಸಾಕ್ಷಿಯು ಗೋವಾದಲ್ಲಿ ಆಗಿತ್ತು, ನಮಗೆ ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. ದೇವಪ್ಪ ನಾಯ್ಕ ಇವರು ಅವರ ಕುಟುಂಬದ ಯಾವುದೇ ವ್ಯವಹಾರಕ್ಕೆ ಸುಮಾರು 20-25 ವರ್ಷಗಳತನಕ ತಲೆ ಹಾಕಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಜಯವಂತ ನಾಯ್ಕ ಇವರಿಗೆ ದಾವಾ ಆಸ್ತಿಗಳನ್ನು ಸಾಗುವಳಿ ಮಾಡಿಕೊಂಡು ಫಲ ತಗೆದುಕೊಂಡು ಹೋಗುವಂತಹ ಯಾವುದೇ ಇಚ್ಛೆ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆದರೆ ಅವರು ಸಹಾಯ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾರಿಗೆ ಸಹಾಯ ಮಾಡಿರುತ್ತಾರೆ ಎಂದರೆ ಸಾಕ್ಷಿಯು 2ನೇ ಪ್ರತಿವಾದಿ ಮತ್ತು ಅವರ ತಾಯಿಗೆ ಪ್ರತಿತಿಂಗಳು ದುಡ್ಡಿನ ಸಹಾಯವನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರಿಗೆ ಕುಟುಂಬದ ದಾವಾ ಆಸ್ತಿಗಳು ಇರುವ ಬಗ್ಗೆ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು 2013 ನೇ ಸಾಲಿನಲ್ಲಿ ಅವರಿಗೆ 2ನೇ ಬಾರಿ ಪಾರ್ಶ್ವವಾಯು ಆದಾಗ ಬೆಳಂಬರಗೆ ತೋರಿಸಲು ಬಂದಾಗ ಅಲ್ಲಿ ಎಲ್ಲರೂ ಬಂದಿದ್ದರು, ಆಗ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ಅವರ ತಂದೆಯ ಮನೆಗೆ ಹೋಗಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಯಾವುದೇ ಕಾಲದಲ್ಲೂ ಸಹ ದಾವಾ ಮನೆಗೆ ಬಂದಿದ್ದೇ ಇರುವುದಿಲ್ಲ ಎಂದು 2ನೇ ಪ್ರತಿವಾದಿಯು ಹೇಳುತ್ತಾರೆ ಎಂದರೆ ಸರಿಯಲ್ಲ.

3. ಜಯವಂತ ನಾಯ್ಕ ಇವರಿಗೆ ಮೊದಲೇ ಮದುವೆಯಾಗಿತ್ತು ಎಂದರೆ ಗೊತ್ತಿರುವುದಿಲ್ಲ. ದಾವಾ ಸಲ್ಲಿಸಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.9ನೇ ಪ್ರತಿವಾದಿ ಯಾರು ಎಂದರೆ ಸಾಕ್ಷಿಯು ಜಯವಂತ ನಾಯ್ಕ ಇವರ ಮೊದಲ ಹೆಂಡತಿಯ ಮಗ ಆಗಿದ್ದು, ಜಯವಂತ ನಾಯ್ಕ ಇವರು ತೀರಿಕೊಂಡಾಗ ಅವರೂ ಸಹ ಬಂದಿದ್ದರು ಎಂದು ನುಡಿಯುತ್ತಾರೆ. ನಿಮ್ಮ ದಾವೆಯಲ್ಲಿ 9ನೇ ಪ್ರತಿವಾದಿಯ ಮೊಬೈಲ್ ಸಂಖ್ಯೆಯನ್ನೂ ಸಹ ನಮೂದು ಮಾಡಿದ್ದು, ಅದು ನಿಮಗೆ ಹೇಗೆ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಅವರೇ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಜಯವಂತ ನಾಯ್ಕ ಇವರ ತಾಯಿ ಬಗ್ಗೆ ವಿಚಾರಣೆ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರಿಗೂ ಹಾಗೂ ಅವರ ಮೊದಲನೇ ಹೆಂಡತಿಯ ಮಧ್ಯ ವಿವಾಹ ವಿಚ್ಛೇದನ ಆಗಿರಲಿಲ್ಲ ಎಂದರೆ ಸರಿ. ಸದರಿ ದಾವೆಯಲ್ಲಿ ಅವರುಾ ಸಹ ಅವಶ್ಯ ಪಕ್ಷಗಾರರು ಆಗುತ್ತಾರೆ ಎಂದರೆ ಸರಿ. ಜಯವಂತ ನಾಯ್ಕ ಇವರು ತೀರಿಕೊಂಡ ನಂತರ ಅವರ ಇಲಾಖೆಯಿಂದ ಬರತಕ್ಕ ಪ್ರಾವಿಡೆಂಡ್ ಫಂಡ್, ಪೆನ್ಸನ್ ಯಾರು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಯಾವುದೂ ಸಹ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವೇನಾದರೂ ಇಲಾಖೆಗೆ ಹೋಗಿ ವಿಚಾರಣೆ ಮಾಡಿರುತ್ತೀರಾ ಎಂದರೆ ಸಾಕ್ಷಿಯು ಮಾಡಿದ್ದು, ಅವರು ಲೆಟರ್ ಕೊಡಲು ಹೇಳಿದ್ದು, ಮೊದಲನೇ ಹೆಂಡತಿಯ ಮಗ ನಾವು ಅದಕ್ಕೆ ತಲೆನೇ ಹಾಕುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರ ಪೆನ್ಸನ್ ನ್ನು ಅವರ ಹೆಂಡತಿ ಪಡೆದುಕೊಳ್ಳುತ್ತಿದ್ದು, ಹಾಗೂ ಇಲಾಖೆಯಿಂದ ಬರುವಂತಹ ಎಲ್ಲ ಹಣನ್ನು 9ನೇ ಪ್ರತಿವಾದಿ ಮತ್ತು ಆತನ ತಾಯಿ ಪಡೆದುಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. 9ನೇ

ಪ್ರತಿವಾದಿಯ ತಾಯಿ ವಿಜಯಾ ಇವರನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ಅವರನ್ನು ಸೇರಿಸಿದರೆ ನಿಮ್ಮ ಮದುವೆ ಬಗ್ಗೆ ನಿಜವಾದ ಸಂಗತಿ ಹೊರಗಡೆ ಬರುತ್ತದೆ ಎಂಬ ಕಾರಣದಿಂದ ಅವರನ್ನು ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಜಯವಂತ ನಾಯ್ಕ ಇವರು ನಿಮ್ಮನ್ನು ಯಾವುದೇ ಕಾಲದಲ್ಲೂ ಮದುವೆಯಾಗಿದ್ದಾಗಲಿ, ಅಥವಾ ಅವರ ಜೀವಿತಾಕಾದಲ್ಲಿ ನಿಮ್ಮನ್ನು ಹೆಂಡತಿಯಾಗಿ ಪರಿಗಣಿಸಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಅವರ ಮನೆಗೆ ಕೆಲಸಕ್ಕೆಂದು ಹೊಗುತ್ತಿದ್ದು, ಅವರಿಗೆ ಪಾರ್ಶ್ವವಾಯು ಆಗಿರುವ ದುರ್ಲಾಭವನ್ನು ಪಡೆದುಕೊಂಡು ಹೆಂಡತಿಯ ಮತ್ತು ಮಕ್ಕಳು ಎಂದು ಹೇಳಿಕೊಂಡು ಈ ರೀತಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ಅವರಿಗೆ ಪಾರ್ಶ್ವವಾಯು ಆದಾಗ 2ನೇ ಪ್ರತಿವಾದಿಯು ಹಾಗೂ ಇವರ ಹೆಂಡತಿ ಹೋಗಿ ಅವರಿಗೆ ಉಪಚಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಇತರ ಕೆಲಸಗಳಿಗೆ ನಿಮ್ಮಿಂದಲೂ ಸಹ ಸಹಾಯ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನೀವು ಬೆಳಂಬಾರಕ್ಕೆ ಕೂಲಿಯಾಗಿ ಬಂದಿದ್ದು, ಬಿಟ್ಟರೆ ಜಯವಂತ ನಾಯ್ಕ ಇವರು ನಿಮ್ಮನ್ನು ಹೆಂಡತಿಯಾಗಿ ಎಂದಿಗೂ ಸಹ ಪರಿಗಣಿಸಿರುವುದಿಲ್ಲ ಎಂದರೆ ಸರಿಯಲ್ಲ.

4. ನೀವು ನಿಮ್ಮ ಆಧಾರ ಕಾರ್ಡವನ್ನು ನಿಮ್ಮ ಎಷ್ಟನೇ ವರ್ಷಕ್ಕೆ ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನನಗೆ 23 ವರ್ಷವಾದಾಗ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಂದೆ ಹೆಸರು ಹಾಗೂ ನಿಮ್ಮ ಊರು ತೋರಿಸುವಂತಹ ಆಧಾರ ಕಾರ್ಡನ್ನು ಪಡೆದುಕೊಂಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ತಂದೆಯ ಒಟ್ಟಗೆ ಇರುವ ಆಧಾರ ಕಾರ್ಡನ್ನು ಮರೆ ಮಾಚಿ, ಸುಳ್ಳು ಆಧಾರ ಕಾರ್ಡನ್ನು

ಮಾಡಿಸಿಕೊಂಡು ಹಾಜರುಪಡಿಸಿರುತ್ತೀರಿ ಎಂದರೆ ಸರಿಯಲ್ಲ. ಜಯವಂತ ನಾಯ್ಕ ಇವರಿಗೆ ಪಾರ್ಶ್ವವಾಯು ಆಗಿದ್ದರಿಂದ ದೈಹಿಕ ಸಂಬಂಧ ಮಾಡುವಂತಹ ಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಗರ್ಭಿಣಿಯಾದ ತಕ್ಷಣ ಆಶಾ ಕಾರ್ಯಕರ್ತರು ಗರ್ಭಿಣಿಯನ್ನು ಸಂಪರ್ಕಿಸಿ ತಾಯಿ ಕಾರ್ಡ ಮಾಡುತ್ತಾರೆ ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾವು ಊರಲ್ಲಿ ಇದ್ದು, ಇಸಿಜಿ ಮತ್ತು ಡೆಲಿವರಿ ಮಾಡಿಸಿರುವ ದಾಖಲೆಗಳು ಇರುತ್ತವೆ ಎಂದು ನುಡಿಯುತ್ತಾರೆ. ನಿಮ್ಮ ಎರಡೂ ಮಕ್ಕಳಿಗೆ ಸಂಬಂಧಪಟ್ಟು ತಾಯಿ ಕಾರ್ಡ ಇಲ್ಲವಾ ಎಂದರೆ ಸಾಕ್ಷಿಯು ಮಾಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. 2 ಮತ್ತು 3ನೇ ವಾದಿಯರು ಎಲ್ಲಿ ಜನಿಸಿರುತ್ತಾರೆ ಎಂದರೆ ಸಾಕ್ಷಿಯು ಮಂಡ್ಯದ ನಮ್ಮ ತಾಯಿಯ ಮನೆಯಲ್ಲಿ ಜನಿಸಿರುತ್ತಾರೆ ಎಂದು ನುಡಿಯುತ್ತಾರೆ. ಅವರ ಜನನ ಪ್ರಮಾಣ ಪತ್ರವನ್ನು ಮಾಡಿಸಿರುತ್ತೀರಾ ಎಂದರೆ ಇದೆ ಎಂದು ನುಡಿಯುತ್ತಾರೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನಿಮಗೆ ಜಯವಂತ ನಾಯ್ಕ ಇವರ ಸಹೋದರರ ಕುಟುಂಬದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿಯು ಜಯವಂತ ನಾಯ್ಕ ಇವರಿಗೆ 5 ಸಹೋದರಿಯವರು ಮತ್ತು ಇಬ್ಬರು ಸಹೋದರರು ಎಂದು ನುಡಿಯುತ್ತಾರೆ. ದೇವಪ್ಪ ನಾಯ್ಕ ಇವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿಯು ಇಬ್ಬರು ಎಂದು ನುಡಿಯುತ್ತಾರೆ. ದೇವಪ್ಪ ನಾಯ್ಕ ಇವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. 6 ರಿಂದ 8ನೇ ಪ್ರತಿವಾದಿಯರು ದೇವಪ್ಪನ ನಾಯ್ಕ ಇವರ ಮಕ್ಕಳು ಎಂದರೆ ಸರಿ. ಅವರ ಮೊದಲ ಹೆಂಡತಿ ಜೀವಂತ ಇದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅವರಿಗೆ ಇನ್ನೊಬ್ಬ ಹೆಂಡತಿ ಇದ್ದರು ಎಂದರೆ ಸರಿ. ಅವರ ಹೆಸರು ಸುಲೋಚನಾ ದೇವಪ್ಪ ನಾಯ್ಕ ಇದ್ದು, ಅವರಿಗೆ ಒಬ್ಬ ಮಗ ಇದ್ದು, ಅವನ ಹೆಸರು ಮಿಥುನ್ ದೇವಪ್ಪ ನಾಯ್ಕ ಎಂದರೆ

ಸರಿ. ಸದರಿ ವಿಷಯ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಗೊತ್ತಿತ್ತು ಎಂದರೆ ಸರಿ. ಆದರೆ ನೀವು ದಾವೆಯಲ್ಲಿ ಅವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವಂಶಾವಳಿಯಲ್ಲೂ ಸಹ ಈ ವಿಷಯವನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ಗೋವಿಂದ ನಾಯ್ಕ ಇವರ ಮಕ್ಕಳಲ್ಲಿ ಯಾರೂ ಸಹ ದಾವಾ ಆಸ್ತಿಗಳಲ್ಲಿ ವಾಸ್ತವ್ಯ ಮಾಡಿಕೊಂಡು ಬಂದಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಆದರೆ ದಾವಾ ಆಸ್ತಿಗೆ ಬಂದುಹೋಗುತ್ತಾರೆ ಎಂದು ನುಡಿಯುತ್ತಾರೆ. ಇವರು ಯಾರೂ ಸಹ ದಾವಾ ಆಸ್ತಿಗೆ ಬಂದು ಮನೆ ರಿಪೇರಿ ಮಾಡುವುದನ್ನು ನೋಡಿರುವುದಿಲ್ಲ ಎಂದರೆ ಸರಿ. ನೀವೇನಾದರೂ ಅವರು ದಾವಾ ಆಸ್ತಿಗೆ ಬಂದು ತೆಂಗಿನಕಾಯಿಯನ್ನು ತೆಗೆಯಲು ಬುಡ ತೆಗೆಯುದನ್ನು ನೋಡಿರುತ್ತೀರಾ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯು ಮಾಡಿರುವುದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಅವರು ದಾವಾ ಆಸ್ತಿಯಲ್ಲಿ ಗಿಡ ಮರಗಳನ್ನು ನೆಟ್ಟು ಅದರಿಂದ ಬರುವ ಫಲವನ್ನು ಪಡೆದುಕೊಂಡಿರುವುದನ್ನು ನೋಡಿರುವುದಿಲ್ಲ ಎಂದರೆ ಸಾಕ್ಷಿಯು 2ನೇ ಪ್ರತಿವಾದಿಯು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯು ಅವರಿಗೆ ದಾವಾ ಆಸ್ತಿಗೆ ಬಂದು ಮರ ಗಿಡಗಳನ್ನು ತೆಗೆಯಲು ಬಿಡುವುದಿಲ್ಲ ಎಂದರೆ ಸಾಕ್ಷಿಯು ನನಗೆ ಅಷ್ಟು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಜಯವಂತ ನಾಯ್ಕ ಇವರ ಮರಣಾನಂತರ ನೀವು ಬೆಂಗಳೂರಿನಲ್ಲಿ ವಾಸ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸರಿ. ಈಗ ದಾವಾ ಆಸ್ತಿಯಲ್ಲಿರುವ ಮನೆಯನ್ನು ಹಾಗೂ ಗಿಡಮರಗಳಿಂದ ಬರುವ ಫಲವನ್ನು 2ನೇ ಪ್ರತಿವಾದಿಯು ಅನುಭವಿಸುತ್ತಾ ಬಂದಿದ್ದಾನೆ ಎಂದರೆ ಸಾಕ್ಷಿಯು ಅಲ್ಲಿ ಯಾವುದೇ ಬೆಳೆ ಬೆಳೆಯುವುದಿಲ್ಲ ಎಂದು ನುಡಿಯುತ್ತಾರೆ. ತೆಂಗಿನ ಮರವನ್ನು ಕಡಿದು ಮಾರಾಟ ಮಾಡುತ್ತಾರೆ ಎಂದು ನುಡಿಯುತ್ತಾರೆ. ಸುಮಾರು 15-20 ವರ್ಷಗಳಿಂದ 2ನೇ

ಪ್ರತಿವಾದಿಯು ಆ ರೀತಿ ಮಾರಾಟ ಮಾಡುತ್ತಾ ಬಂದಿರುತ್ತಾರೆ ಎಂದರೆ ಇರಬಹುದು. ಸದರಿ ವಿಷಯ ಎಲ್ಲ ಪಕ್ಷಗಾರರಿಗೂ ಸಹ ಗೊತ್ತಿರುತ್ತದೆ ಎಂದರೆ ಸರಿ. ಅವರು ಯಾವುದೇ ಕಾಲಕ್ಕೂ ತಕರಾರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಹಾಗೂ ನಮ್ಮ ಯಜಮಾನರೂ ಸಹ ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ರೀತಿಯ ತಕರಾರು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಯಾಕೆ ಈ ರೀತಿ ಒಬ್ಬನೇ ಮರಗಿಡಗಳನ್ನು ಕಡಿದು ಮಾರಾಟ ಮಾಡುತ್ತೀಯಾ ಎಂದು ತಕರಾರು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆ ರೀತಿ 15-20 ವರ್ಷದಿಂದ ತಕರಾರು ಮಾಡಿಕೊಂಡು ಬಂದಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ನೀವು ಅದಕ್ಕೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಂಡಿದ್ದು ಇರುವುದಿಲ್ಲ ಎಂದರೆ ಸರಿ. ಹಾಗೂ 2ನೇ ಪ್ರತಿವಾದಿಯು ದಾವಾ ಆಸ್ತಿಯು ತನ್ನದೇ ಎಂದು ಹಾಗೂ ಯಾರಿಗೂ ಸಹ ಅದರಲ್ಲಿ ಹಕ್ಕು ಇರುವುದಿಲ್ಲ ಎಂದು ಹೇಳಿಕೋಂಡು ಬಂದಿರುತ್ತಾರೆ ಎಂದರೆ ಗೊತ್ತಿರುವುದಿಲ್ಲ. ದಾವಾ ಸಲ್ಲಿಸಿದ ನಂತರ 2ನೇ ಪ್ರತಿವಾದಿಯು ಸಲ್ಲಿಸಿದ ತಕರಾರಿನಲ್ಲಿ ಏನು ಬರೆದಿರುತ್ತಾನೆ ಎಂದು ನಿಮ್ಮ ವಕೀಲರು ನಿಮಗೆ ಹೇಳಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಈ ರೀತಿ ತಕರಾರು ಹಾಕಿರುತ್ತಾರೆ ಎಂದ ನಿಮ್ಮ ನಾದಿನಿ ಎಂದು ಹೇಳಿಕೊಂಡ ವ್ಯಕ್ತಿಯ ಜೊತೆಗೆ ಚರ್ಚೆ ಮಾಡಿರುತ್ತೀರಾ ಇಲ್ಲ ಎಂದು ನುಡಿಯುತ್ತಾರೆ. 2ನೇ ಪ್ರತಿವಾದಿಯು ದಾವಾ ಆಸ್ತಿ ಸಂಪೂರ್ಣ ತನ್ನದೇ ಹಾಗೂ ವಿರುದ್ಧ ಕಬ್ಜಾ ನಾತೆಯಿಂದ ಅವನಿಗೆ ಬಂದಿರುತ್ತದೆ ಎಂದು ಅವರಿಗೆ ಗೊತ್ತಿರುವುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

C/c. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.